<u>ದಿವಾಣಿ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಬ್ಯಾಡಗಿ.</u>

ಸಿಸಿ. ನಂ.144/2019

ದೂರುದಾರರುಃ
ಕರ್ನಾಟಕ ರಾಜ್ಯ , ಪೊಲೀಸ್ ಉಪ ನಿರೀಕ್ಷಕರು, ಬ್ಯಾಡಗಿ ಪೊಲೀಸ್ ಠಾಣೆ.
ಬ್ಯಾಡಗಿ.

ವಿರುದ್ಧ

ಆರೋಪಿತರುಃ

1. ಅಯೂಬಖಾನ ಉರ್ಫ್ ಅಯ್ಯು ತಂದೆ ದಾದಾಪೀರ ರಟ್ಟೆಹಳ್ಳಿ
ವಯಾಃ 20 ವರ್ಷ, ಸಾಃ ನಿಟ್ಟೂರು, ತಾಃ ಹಿರೇಕೆರೂರು,
ಜಿಃ ಹಾವೇರಿ.

2. ರಿಜ್ವಾನ ತಂದೆ ನೂರುಲ್ಲಾ ಹಂಚಿ, ವಯಾಃ 20 ವರ್ಷ
ಉಃ ಕೂಲಿಕೆಲಸ, ಸಾಃ ನಿಟ್ಟೂರು, ತಾಃ ಹಿರೇಕೆರೂರು,
ಜಿಃ ಹಾವೇರಿ.

## <u>ಸಿ ಆರ್ ಪಿ ಸಿ 313 ರ ಅಡಿಯಲ್ಲಿ ಆರೋಪಿತರ ಹೇಳಿಕೆ</u>

**ಪ್ರಃ1.** ಈ ಪ್ರಕರಣದಲ್ಲಿ ನೀವು ಅಭಿಯೋಜಕರ ಪರ ಸಾಕ್ಷಿದಾರರು ನುಡಿದಿರುವ ಸಾಕ್ಷಿಯನ್ನು ಕೇಳಿರುವೆಯ ಹೇಗೆ?

ಉಃ 1 ನೇ ಆರೋಪಿ
2 ನೇ ಆರೋಪಿ

**ಪ್ರಃ2. ಪಿಡಬ್ಲ್ಯೂ-1,** ಅಣ್ಣಪ್ಪ ತಂದೆ ಮಲ್ಲಪ್ಪ ಕಾಳ, ಇವರು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, - ತಾನು ಸುಮಾರು 15 ವರ್ಷಗಳಿಂದ ಬ್ಯಾಡಗಿ ಶಹರದ ರಟ್ಟೀಹಳ್ಳಿ ರಸ್ತೆಯ ಶ್ರೀ ಬೀರೇಶ್ವರ ದೇವಸ್ಥಾನದ ಎದುರಿಗೆ ಓಂ ಕಮ್ಯೂನಿಕೇಷನ್ ಎನ್ನುವ ಹೆಸರಿನ ಮೊಬೈಲ್ ಅಂಗಡಿಯನ್ನು ಇಟ್ಟುಕೊಂಡಿರುತ್ತೇನೆಂದು, ಸದರಿ ಅಂಗಡಿಯನ್ನು ತಾನು ಮತ್ತು ಚಾಸಾ-5 ರವರು ನಡೆಸಿಕೊಂಡು ಬರುತ್ತಿದ್ದೇವೆಂದು, ದಿನಾಂಕಃ18.12.2018 ರಂದು ರಾತ್ರಿ 09-30 ಗಂಟೆಗೆ ತಾನು ಮತ್ತು ಚಾಸಾ-

5 ರವರು ಕೂಡಿಕೊಂಡು ತಮ್ಮ ಮೊಬೈಲ್ ಅಂಗಡಿಯನ್ನು ಬಂದು ಮಾಡಿಕೊಂಡು ಅಂಗಡಿಯ ಶೆಟರ್ ಗಳನ್ನು ಎಳೆದುಕೊಂಡು ಕೀಲಿ ಹಾಕಿಕೊಂಡು ಮನೆಗೆ ಹೋಗಿರುತ್ತೇವೆಂದು, ದಿನಾಂಕಃ 19-12-2018 ರಂದು ಬೆಳಗ್ಗೆ 07-00 ಗಂಟೆ ಸುಮಾರಿಗೆ ತನ್ನ ಅಂಗಡಿಯ ಮುಂಭಾಗ ಸೆಲ್ಯೂನನ್ನು ನಡೆಸುತ್ತಿರುವ ಚಾಸಾ-2 ರವರು ತನಗೆ ಫೋನ್ ಮಾಡಿ ನಿಮ್ಮ ಅಂಗಡಿಯ ಶೆಟರ್ ಸ್ವಲ್ಪ ಮೇಲೆ ಬಂದಿದೆ ಬಂದು ನೋಡಿ ಎಂದು ತನಗೆ ಹೇಳಿದ್ದು, ನಂತರ ಸದರಿ ವಿಷಯವನ್ನು ತಾನು ತನ್ನ ಅಣ್ಣನಿಗೆ ತಿಳಿಸಿ ಕೂಡಲೇ ತಮ್ಮ ಅಂಗಡಿಗೆ ಬಂದೆವು ಎಂದು, ಹಾಗೆ ಬಂದು ಅಂಗಡಿಯನ್ನು ನೋಡಿದ ಕೂಡಲೇ ಯಾರೋ ಕಳ್ಳರು ಯಾವುದೋ ಆಯುಧದಿಂದ ಶೆಟರ್ ಅನ್ನು ಮುರಿದಿದ್ದು, ಬೀಗವನ್ನು ಕೂಡ ಮುರಿದಿದ್ದು ಕಂಡು ಬಂತು ಎಂದು, ನಂತರ ಅಲ್ಲಿಯೇ ಪಕ್ಕದಲ್ಲಿ ಎರಡು ಕಬ್ಬಿಣದ ರಾಡ ಮತ್ತು ಒಂದು ಸ್ಕ್ರೂ ಡ್ರೈವರ್ ಬಿದ್ದಿದ್ದವು ಎಂದು, ನಂತರ ತನ್ನ ಅಣ್ಣ ಚಾಸಾ-5 ರವರು ಪೋಲೀಸರಿಗೆ ವಿಷಯ ಮುಟ್ಟಿಸಿದ್ದು ಅವರ ಘಟನಾ ಸ್ಥಳಕ್ಕೆ ಬೇಟಿ ನೀಡಿರುತ್ತಾರೆಂದು, ಹಾಗೆ ಪೋಲೀಸರು ಅಲ್ಲಿಗೆ ಬಂದ ನಂತರ ಅಂಗಡಿಯ ಒಳಗೆ ಹೋಗಿ ನೋಡಲಾಗಿ Rack ನಲಿಟ್ಟಿದ್ದ ಹೊಸ ಮೊಬೈಲ್ ಫೋನಗಳು ಕಾಣೆಸಿಲಿಲ್ಲ ಎಂದು, ತಮ್ಮ ಅಂಗಡಿಯಲ್ಲಿ ಯಾರೋ ಕಳ್ಳರು ದಿಃ 18.12.2018 ರ ರಾತ್ರಿ 09-30 ರ ದಿಃ 19-12-2018 ರ ಬೆಳಗ್ಗೆ 07-00 ಗಂಟೆಯ ನಡುವಿನ ಅವಧಿಯಲ್ಲಿ ಕಳ್ಳತನ ಮಾಡಿರುವ ಬಗ್ಗೆ ಖಚಿತವಾಯಿತು ಎಂದು, ನಂತರ ಸ್ಯಾಮಸಂಗ, ಲಾವಾ, ನೋಕಿಯ, ಎಂ. ಐ., ಟೆಕ್ನೋ ಕೆಮನ್ ನ ಒಟ್ಟು 32 ಮೊಬೈಲ್ ಫೋನಗಳು ಕಳುವು ಆಗಿರುವ ಬಗ್ಗೆ ತಿಳಿದು ಬಂದಿರುತ್ತದೆ ಎಂದು, ಇವುಗಳ ಅಂದಾಜು ಕಿಮ್ಮತ್ತು ಒಂದು ಲಕ್ಷದ ಅರವತ್ತೇದು ಸಾವಿರದ ಆರು ನೂರಾ ನಾಲ್ಕು ರೂಪಾಯಿ ಆಗಿರುತ್ತದೆ ಎಂದು, ತನ್ನ ಅಂಗಡಿಯಲ್ಲಿ ಕಳುವು ಆದ ಬಗ್ಗೆ ತಾನು ಪೋಲೀಸರಿಗೆ ನೀಡಿದ ಗಣಕೀಕೃತ ದೂರಿನಲ್ಲಿ ವಿವರವಾಗಿ ನಮೂದಿಸಿರುತ್ತೇನೆಂದು, ದಿನಾಂಕಃ 20-12-2018 ರಂದು ಪೋಲೀಸರು ತನ್ನ ಹೇಳಿಕೆಯನ್ನು ಪಡೆದುಕೊಂಡು ನಂತರ ಘಟನಾ ಸ್ಥಳಕ್ಕೆ ಬಂದು ಚಾಸಾ-2 ಮತ್ತು 3 ರವರ ಸಮಕ್ಷಮ ಮಧ್ಯಾಹ್ನ 03-30 ರಿಂದ 04-30 ರವರೆಗೆ ಪಂಚನಾಮೆಯನ್ನು ಜರುಗಿಸಿದ್ದು, ಸದರಿ ಪಂಚನಾಮೆಯನ್ನು ನನ್ನ ಮಾಹಿತಿಯಂತೆ ತಯಾರಿಸಿದ್ದು, ಆರೋಪಿತರುಗಳು ಕಳ್ಳತನ ಮಾಡಲು ಉಪಯೋಗಿಸಿದ ಎರಡು ಕಬ್ಬಿಣದ ರಾಡುಗಳು ಸ್ಕ್ರೂ ಮತ್ತು ತನ್ನ ಅಂಗಡಿಯ ಕೀಲಿಯನ್ನು ಮುರಿದು ಅಲ್ಲಿಯೇ ಬಿಟ್ಟು ಹೋಗಿದ್ದು, ಅದನ್ನು ಜಪ್ತು ಪಡಿಸಿಕೊಂಡಿರುತ್ತಾರೆಂದು, ದಿನಾಂಕಃ 28-12-2018 ರಂದು ಪೋಲೀಸರು ತನ್ನನ್ನು ಪೋಲೀಸ್ ಠಾಣೆಗೆ ಕರೆದು ಕೆಲವೊಂದು ಮೊಬೈಲಗಳನ್ನು ತೋರಿಸಿ ಇವುಗಳು ನಿಮಗೆ ಸೇರಿದ್ದಾ ಎಂದು ತನ್ನಲ್ಲಿ ಕೇಳಿದ್ದು, ಅವುಗಳನ್ನು ಪರಿಶೀಲಿಸಿ

ನಂತರ ಅವುಗಳು ತನಗೆ ಸೇರಿದ್ದು ಎಂದು ತಾನು ಪೋಲೀಸರಿಗೆ ತಿಳಿಸಿರುತ್ತೇನೆಂದು, ಆ ಸಮಯದಲ್ಲಿ ಇಬ್ಬರು ಆರೋಪಿತರುಗಳು ಪೋಲೀಸ್ ಠಾಣೆಯಲ್ಲಿ ಹಾಜರಿದ್ದು, ಪೋಲೀಸರು ಅವರನ್ನು ತೋರಿಸಿ ಇವರೇ ಮೊಬೈಲ್ ಅಂಗಡಿಗೆ ಕನ್ನ ಹಾಕಿ ನಿಮ್ಮ ಮೊಬೈಲಗಳನ್ನು ಕದ್ದಿರುತ್ತಾರೆ ಎಂದು ತನಗೆ ತಿಳಿಸಿರುತ್ತಾರೆ ಎಂದು, ಈ ಬಗ್ಗೆ ತಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆಂದು, ನಂತರ ಪೋಲೀಸರು ಕಳುವು ಆದ ವಸ್ತುಗಳನ್ನು ತಾವು ನ್ಯಾಯಾಲಯಕ್ಕೆ ಹಾಜರುಪಡಿಸಬೇಕಾಗಿದ್ದು, ನೀನು ಮಾನ್ಯ ನ್ಯಾಯಾಲಯದಿಂದ ಸದರಿ ಕಳುವು ಆದ ಮೊಬೈಲಗಳನ್ನು ಅರ್ಜಿ ಹಾಕಿ ಬಿಡಿಸಿಕೊಡಬೇಕು ಎಂದು, ಹೇಳಿದ್ದು ಅದರಂತೆ ತಾನು ಮಾನ್ಯ ನ್ಯಾಯಾಲಯದಿಂದ ಮೊಾಬೈಲಗಳನ್ನು ಬಿಡಿಸಿಕೊಂಡಿರುತ್ತೇನೆಂದು, ತನ್ನ ಅಂಗಡಿಯಿಂದ ಕಳುವು ಆದ 32 ಮೊಾಬೈಲಗಳ ಪೈಕಿ ನಾಲ್ಕು ಮೊಬೈಲಗಳನ್ನು ಆರೋಪಿತರುಗಳು ಮಾರಾಟ ಮಾಡಿರುತ್ತಾರೆಂದು, ಹಾಗೆ ಮಾರಾಟ ಮಾಡಿದ ನಾಲ್ಕು ಮೊಾಬೈಲಗಳನ್ನು ಪೋಲೀಸರು ಜಪ್ತುಪಡಿಸಿರುತ್ತಾರೆಂದು, ದೂರನ್ನು ನೀಡುವಾಗ ಒಟ್ಟು 32 ಮೊಾಬೈಲಗಳು ಕಳುವು ಆದ ಬಗ್ಗೆ ದೂರನು ನೀಡಿರುತ್ತೇನೆ ಆದರೆ 32 ಮೊಾಬೈಲಗಳು ಪೈಕಿ ಒಂದು ಮೊಬೈಲನ್ನು ಕಳುವು ಆಗುವುದಕ್ಕಿಂತ ಪೂರ್ವದಲ್ಲಿ ಮಾರಾಟ ಮಾಡಿದುದರಿಂದ ಒಟ್ಟು 31 ಮೊಾಬೈಲಗಳನ್ನು ಆರೋಪಿತರಿಂದ ಜಪ್ತುಪಡಿಸಿಕೊಟ್ಟಿರುತ್ತಾರೆ ಎಂದು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉಃ 1 ನೇ ಆರೋಪಿ

2 ನೇ ಆರೋಪಿ

**ಪ್ರಃ3. ಪಿಡಬ್ಲ್ಯೂ-2,** ಕೃಷ್ಣಪ್ಪ ತಂದೆ ಸಿದ್ದಪ್ಪ ನೆಗಳೂರು, ಇವರು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, – ದಿನಾಂಕಃ 20.12.2018 ರಂದು ಬ್ಯಾಡಗಿ ಠಾಣೆ, ಪೋಲೀಸರು ಸದರಿ ಪ್ರಕರಣದಲ್ಲಿ ತನ್ನನ್ನು ಮತ್ತು ಚಾಸಾ-3 ರವರನ್ನು ಘಟನಾ ಸ್ಥಳದ ಪಂಚನಾಮೆಗೆ ಸಾಕ್ಷಿದಾರರಾಗುವಂತೆ ಬರಲು ತಿಳಿಸಿದ್ದರಿಂದ ತಾವು ಪಂಚನಾಮೆಗೆ ಸಾಕ್ಷಿದಾರರಾಗಿ ತೆರಳಿರುತ್ತೇವೆಂದು, ಘಟನಾ ಸ್ಥಳದಲ್ಲಿ ಚಾಸಾ-1 ರವರು ಪೋಲೀಸರಿಗೆ ತನ್ನ ಅಂಗಡಿಯಲ್ಲಿ ಕಳುವು ಆದ ಬಗ್ಗೆ ಮಾಹಿತಿಯನ್ನು ನೀಡಿದ್ದು, ತನ್ನ ಮತ್ತು ಚಾಸಾ-3 ರವರ ಸಮಕ್ಷಮ ಮಧ್ಯಾಹ್ನ 03-30 ರಿಂದ 04-30 ರ ವರೆಗೆ ಘಟನಾ ಸ್ಥಳದ ಪಂಚನಾಮೆಯನ್ನು ತಯಾರಿಸಿರುತ್ತಾರೆಂದು, ಸದರಿ ಪಂಚನಾಮೆಯನ್ನು ತಯಾರಿಸುವ ಕಾಲಕ್ಕೆ ಘಟನಾ ಸ್ಥಳದ ಹಾತ್ ನಕಾಶೆ ಮತ್ತು ಭಾವಚಿತ್ರಗಳನ್ನು ತೆಗೆದಿರುತ್ತಾರೆಂದು, ನಿಪಿ-4 ನ್ನು ಪೋಲೀಸರು ಬರೆದು ತನಗೆ ಮತ್ತು ಚಾಸಾ-3 ರವರಿಗೆ ಓದಿ

ಹೇಳಿರುತ್ತಾರೆಂದು, ಆರೋಪಿತರು ಕೃತ್ಯಕ್ಕೆ ಬಳಸಿದ ಕಬ್ಬಿಣದ ರಾಡುಗಳನ್ನು ಮತ್ತು ಸ್ಕ್ರೂಡ್ರೈವರನ್ನು ಹಾಗೂ ಬೀಗವನ್ನು ಪೋಲೀಸರು ಜಪ್ತುಪಡಿಸಿಕೊಂಡಿರುತ್ತಾರೆಂದು, ದಿನಾಂಕಃ 27.12.2018 ರಂದು ಬ್ಯಾಡಗಿ ಪೋಲೀಸರು ಪೋಲೀಸ್ ಠಾಣೆಗೆ ತನ್ನನ್ನು ಮತ್ತು ಚಾಸಾ–4 ರವರನ್ನು ಬರಹೇಳಿದ್ದರಿಂದ ತಾವು ಠಾಣೆಗೆ ಹಾಜರಾಗಿ ಚಾಸಾ–8 ರವರು ಹಾಜರುಪಡಿಸಿದ ಈ ಪ್ರಕರಣದಲ್ಲಿ ಕಳುವು ಮಾಡಿದ ನೀಲಿ ಬಣ್ಣದ ರೆಡ್ ಮಿ ಕಂಪನಿಯ ಆರ್.ಎ ಮೊಬೈಲನ್ನು ಹಾಜರುಪಡಿಸಲು ಠಾಣೆಯಲ್ಲಿ ಬೆಳಗ್ಗೆ 11–00 ರಿಂದ 11–45 ರ ನಡುವಿನ ಅವಧಿಯಲ್ಲಿ ಪಂಚನಾಮೆಯನ್ನು ತಯಾರಿಸಿರುತ್ತಾರೆಂದು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉಃ 1 ನೇ ಆರೋಪಿ

2 ನೇ ಆರೋಪಿ

**ಪ್ರಃ4. ಪಿಡಬ್ಲ್ಯೂ–3,** ವಿಶ್ವನಾಥ ಮಾಲತೇಶ ಸುಣಗಾರ, ಇವರು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, – ದಿನಾಂಕಃ 20.12.2018 ರಂದು ಬ್ಯಾಡಗಿ ಠಾಣೆ, ಪೋಲೀಸರು ಸದರಿ ಪ್ರಕರಣದಲ್ಲಿ ತನ್ನನ್ನು ಮತ್ತು ಚಾಸಾ–2 ರವರನ್ನು ಘಟನಾ ಸ್ಥಳದ ಪಂಚನಾಮೆಗೆ ಸಾಕ್ಷಿದಾರರಾಗುವಂತೆ ಬರಲು ತಿಳಿಸಿದ್ದರಿಂದ ತಾವು ಪಂಚನಾಮೆಗೆ ಸಾಕ್ಷಿದಾರರಾಗಿ ತೆರಳಿರುತ್ತೇವೆಂದು, ಘಟನಾ ಸ್ಥಳದಲ್ಲಿ ಚಾಸಾ–1 ರವರು ಪೋಲೀಸರಿಗೆ ತನ್ನ ಅಂಗಡಿಯಲ್ಲಿ ಕಳುವು ಆದ ಬಗ್ಗೆ ಮಾಹಿತಿಯನ್ನು ನೀಡಿದ್ದು, ತನ್ನ ಮತ್ತು ಚಾಸಾ–2 ರವರ ಸಮಕ್ಷಮ ಮಧ್ಯಾಹ್ನ 03–30 ರಿಂದ 04–30 ರ ವರೆಗೆ ಘಟನಾ ಸ್ಥಳದ ಪಂಚನಾಮೆಯನ್ನು ತಯಾರಿಸಿರುತ್ತಾರೆಂದು, ಸದರಿ ಪಂಚನಾಮೆಯನ್ನು ತಯಾರಿಸುವ ಕಾಲಕ್ಕೆ ಘಟನಾ ಸ್ಥಳದ ಹಾತ್ ನಕಾಶೆ ಮತ್ತು ಭಾವಚಿತ್ರಗಳನ್ನು ತೆಗೆದಿರುತ್ತಾರೆಂದು, ನಿಪಿ–4 ನ್ನು ಪೋಲೀಸರು ಬರೆದು ತನಗೆ ಮತ್ತು ಚಾಸಾ–2 ರವರಿಗೆ ಓದಿ ಹೇಳಿರುತ್ತಾರೆಂದು, ಆರೋಪಿತರು ಕೃತ್ಯಕ್ಕೆ ಬಳಸಿದ ಕಬ್ಬಿಣದ ರಾಡುಗಳನ್ನು ಮತ್ತು ಸ್ಕ್ರೂಡ್ರೈವರನ್ನು ಹಾಗೂ ಬೀಗವನ್ನು ಪೋಲೀಸರು ಜಪ್ತುಪಡಿಸಿಕೊಂಡಿರುತ್ತಾರೆಂದು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉಃ 1 ನೇ ಆರೋಪಿ

2 ನೇ ಆರೋಪಿ

**ಪ್ರಃ5. ಪಿಡಬ್ಲ್ಯೂ–4,** ಸುನೀಲ ತಂದೆ ಬಸವರಾಜ ತೋಟಗೇರ, ಇವರು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, – ದಿನಾಂಕಃ 27.12.2018 ರಂದು ಚಾಸಾ–14

ರವರು ತನ್ನನ್ನು ಮತ್ತು ಚಾಸಾ-2 ರವರನ್ನು ಪೋಲೀಸ್ ಠಾಣೆಗೆ ಬರ ಹೇಳಿದ್ದು, ತಾವು ಸಂಜೆ ಅಲ್ಲಿಗೆ ಹೋಗಿರುತ್ತೇವೆಂದು, ನಂತರ ಚಾಸಾ-9 ರಿಂದ ಚಾಸಾ-11 ರವರು ಹಾಜರುಪಡಿಸಿದ ಮೊಬೈಲಗಳ ಜಪ್ತು ಪಂಚನಾಮೆಯನ್ನು ತನ್ನ ಮತ್ತು ಚಾಸಾ-2 ರವರ ಸಮಕ್ಷಮ ಸಾಯಂಕಾಲ 05-30 ರಿಂದ 06-30 ರ ನಡುವಿನ ಅವಧಿಯಲ್ಲಿ ಪೋಲೀಸ್ ಠಾಣೆಯಲ್ಲಿ ತಯಾರಿಸಿರುತ್ತಾರೆಂದು, ಆ ಸಮಯದಲ್ಲಿ ಪೋಲೀಸರು ಭಾವಚಿತ್ರಗಳನ್ನು ತೆಗೆದಿರುತ್ತಾರೆಂದು, ದಿನಾಂಕಃ 28.12.2018 ರಂದು ಪೋಲೀಸರು ಆರೋಪಿತರನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಬಂದಿದ್ದು, ತನ್ನ ಮತ್ತು ಚಾಸಾ-2 ರವರ ಸಮಕ್ಷಮ ಬೆಳಗ್ಗೆ 08-15 ರಿಂದ 09-00 ರ ನಡುವಿನ ಅವಧಿಯಲ್ಲಿ ಆರೋಪಿತರು ತೋರಿಸಿದ ಕಳ್ಳತನ ಮಾಡಿದ ಅಂಗಡಿಯ ಪಂಚನಾಮೆಯನ್ನು ತಯಾರಿಸಿರುತ್ತಾರೆಂದು, ಆ ಸಮಯದಲ್ಲಿ ಪೋಲೀಸರು ಎರಡು ಭಾವಚಿತ್ರಗಳನ್ನು ತೆಗೆದಿರುತ್ತಾರೆಂದು, ದಿನಾಂಕಃ 28.12.2018 ರಂದು ಆರೋಪಿತರು ತಮ್ಮ ಸಮಕ್ಷಮ ಪೋಲೀಸರಿಗೆ ತಾವು ಕಳುವು ಮಾಡಿದ ವಸ್ತುಗಳನ್ನು ಬಚ್ಚಿಟ್ಟಿರುವ ಸ್ಥಳವನ್ನು ತೋರಿಸುತ್ತೇವೆ ಎಂದು ಹೇಳಿದ್ದರಿಂದ ಪೋಲೀಸರು ತನ್ನನ್ನು, ಚಾಸಾ-2 ಮತ್ತು ಆರೋಪಿತರುಗಳನ್ನು ಪೋಲೀಸ್ ವಾಹನದಲ್ಲಿ ಕರೆದುಕೊಂಡು ಹೋಗಿದ್ದು, ತಾವು ಹಂಸಭಾವಿ-ಸಾತೇನಹಳ್ಳಿ ಮಾರ್ಗವಾಗಿ ನಿಟ್ಟೂರು ಗ್ರಾಮಕ್ಕೆ ಹೋಗಿದ್ದು ಅಲ್ಲಿ ಒಂದು ಕಬ್ಬಿನ ಹೊಲದಲ್ಲಿ ಆರೋಪಿತರುಗಳು ಮೊಬೈಲ್ ಬಚ್ಚಿಟ್ಟಿದ್ದನ್ನು ತೋರಿಸಿದ್ದು, ನಂತರ ಪೋಲೀಸರು ಮುಂಜಾನೆ 10-30 ರಿಂದ 12-30 ಗಂಟೆಯ ನಡುವಿನ ಅವಧಿಯಲ್ಲಿ ಸದರಿ ಸ್ಥಳದ ಪಂಚನಾಮೆಯನ್ನು ತಯಾರಿಸಿ, ಕಳುವು ಗೈದ ಮು.ಮಾಗಳನ್ನು ಸದರಿ ಪಂಚನಾಮೆಯಡಿಯಲ್ಲಿ ಅಮಾನತು ಮಾಡಿರುತ್ತಾರೆಂದು, ಆರೋಪಿತರು ಕಳುವು ಗೈದ ಮೊಬೈಲಗಳನ್ನು ಒಂದು ರಟ್ಟಿನ ಬಾಕ್ಸಿನಲ್ಲಿ ಇರಿಸಿದ್ದು, ಅದನ್ನು ಪೋಲೀಸರು ತನ್ನ ಮತ್ತು ಚಾಸಾ-2 ರವರ ಸಮಕ್ಷಮ ತೆರೆದಿರುತ್ತಾರೆಂದು, ಸದರಿ ಸ್ಥಳದಿಂದ ಪೋಲೀಸರು ಆರೋಪಿತರುಗಳು ಕೃತ್ಯಕ್ಕೆ ಬಳಸಿದ ಕಟ್ಟರನ್ನು ಸಹ ಸದರಿ ಪಂಚನಾಮೆಯಡಿ ಪೋಲೀಸರು ಜಪ್ತುಪಡಿಸಿಕೊಂಡಿರುತ್ತಾರೆಂದು, ದಿನಾಂಕಃ 27.12.2018 ರಂದು ಬ್ಯಾಡಗಿ ಪೋಲೀಸರು ಪೋಲೀಸ್ ಠಾಣೆಗೆ ತನ್ನನ್ನು ಮತ್ತು ಚಾಸಾ-2 ರವರನ್ನು ಬರಹೇಳಿದ್ದರಿಂದ ತಾವು ಠಾಣೆಗೆ ಹಾಜರಾಗಿ ಚಾಸಾ-8 ರವರು ಹಾಜರುಪಡಿಸಿದ ಈ ಪ್ರಕರಣದಲ್ಲಿ ಕಳುವು ಮಾಡಿದ ನೀಲಿ ಬಣ್ಣದ ರೆಡ್ ಮಿ ಕಂಪನಿಯ ಆರ್.ಎ ಮೊಬೈಲನ್ನು ಹಾಜರುಪಡಿಸಿದ್ದು ಠಾಣೆಯಲ್ಲಿ ಬೆಳಗ್ಗೆ 11-00 ರಿಂದ 11-45 ರ ನಡುವಿನ ಅವಧಿಯಲ್ಲಿ ಪಂಚನಾಮೆಯನ್ನು ತಯಾರಿಸಿರುತ್ತಾರೆಂದು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉಃ 1 ನೇ ಆರೋಪಿ

2 ನೇ ಆರೋಪಿ

**ಪ್ರ:6. ಪಿಡಬ್ಲ್ಯೂ-5,** ಮಂಜುನಾಥ ತಂದೆ ಮಲ್ಲಪ್ಪ ಕಾಳೆ, ಇವರು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, - ದಿನಾಂಕಃ 18.12.2018 ರಂದು ರಾತ್ರಿ 09-30 ಗಂಟೆ ಸುಮಾರಿಗೆ ತಾವು ಮೊಬೈಲ್ ಅಂಗಡಿಯನ್ನು ಮುಚ್ಚಿ ಮನೆಗೆ ತೆರಳಿರುತ್ತೇವೆಂದು, ನಂತರ ಮಾರನೇ ದಿನ ಬೆಳಗ್ಗೆ ಸುಮಾರು 07.-00 ಗಂಟೆಗೆ ಚಾಸಾ-2 ರವರು ದೂರವಾಣಿ ಕರೆಯನ್ನು ಮಾಡಿ ತಮ್ಮ ಅಂಗಡಿಯ ಶೆಟ್ಟರನ್ನು ಅರ್ಧ ತೆರೆಯಲಾಗಿದ್ದು, ಯಾರೋ ಕಳ್ಳತನ ಮಾಡಿರುತ್ತಾರೆ ಎಂದು ತಿಳಿಸಿದ್ದು, ನಂತರ ತಾನು, ತನ್ನ ತಮ್ಮ ಚಾಸಾ-1 ರವರು ತಮ್ಮ ಅಂಗಡಿಗೆ ತೆರಳಿ ನೋಡಿದಾಗ ಅಂಗಡಿಯ ಶೆಟ್ಟರ ಅರ್ಧ ತೆರೆದಿದ್ದು ಕಂಡು ಬಂದಿದ್ದು ನಂತರ ಬಗ್ಗಿ ನೋಡಿದಾಗ ವಸ್ತುಗಳೆಲ್ಲಾ ಚೆಲ್ಲ ಪಿಲ್ಲಿ ಯಾಗಿ ಬಿದ್ದಿದ್ದು ಕಂಡು ಬಂದಿರುತ್ತದೆ ಎಂದು, ಆ ಸಮಯದಲ್ಲಿ ತಮ್ಮ ಅಂಗಡಿಯ ಮುಂದೆ ಒಂದು ಮುರಿದ ಬೀಗ, ರಾಡ ಹಾಗೂ ಸ್ಕ್ರ್ಯೂ ಡ್ರೈವರ ಕೆಳಗೆ ಬಿದ್ದಿದ್ದು ಕಂಡು ಬಂದಿರುತ್ತದೆ ಎಂದು, ಘಟನೆಯ ಬಗ್ಗೆ ತನ್ನ ತಮ್ಮ ಚಾಸಾ-1 ಪೋಲೀಸರಿಗೆ ಮಾಹಿತಿ ನೀಡಿದ್ದು, ಪೋಲೀಸರು ಘಟನಾ ಸ್ಥಳಕ್ಕೆ ಬಂದು ಅಂಗಡಿಯ ಶೆಟ್ಟರ ಪೂರ್ತಿ ತೆರೆದು ಒಳಹೋಗಿ ನೋಡಿದಾಗ ವಸ್ತುಗಳೆಲ್ಲಾ ಚೆಲ್ಲ ಪಿಲ್ಲಿ ಯಾಗಿ ಬಿದ್ದಿದ್ದು ಕಂಡು ಬಂದಿರುತ್ತದೆ ಎಂದು, ನಂತರ ಪರಿಶೀಲನೆ ಮಾಡಿದಾಗ ರೆಡ್ ಮೀ, ಸ್ಯಾಮಸಂಗ್, ಓಪ್ಪೋ, ವಿವೋ ಹಾಗೂ ಲಾವಾ ಕಂಪನಿಯ ಒಟ್ಟು 31 ಮೊಬೈಲ್ ಸ್ಮಾರ್ಟ ಫೋನಗಳು ಕಳುವು ಆದದ್ದು ಕಂಡು ಬಂದಿರುತ್ತದೆ ಎಂದು, ಘಟನೆಯ ಬಗ್ಗೆ ತನ್ನ ಸಹೋದರ ಚಾಸಾ-1 ಪಿರ್ಯಾದಿಯನ್ನು ನೀಡಿರುತ್ತಾರೆಂದು, ತಾನು ಪೋಲೀಸರಿಗೆ ಘಟನೆಯ ಬಗ್ಗೆ ಹೇಳಿಕೆಯನ್ನು ನೀಡಿರುತ್ತೇನೆಂದು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉಃ 1 ನೇ ಆರೋಪಿ

2 ನೇ ಆರೋಪಿ

**ಪ್ರ:7. ಪಿಡಬ್ಲ್ಯೂ-6,** ಬಸವರಾಜ ತಂದೆ ಶಿವಪ್ಪ ಇದ್ದಲಗಿ, ಇವರು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, - ದಿನಾಂಕಃ18.12.2018 ರಂದು ರಾತ್ರಿ 09-30 ಗಂಟೆ ಸುಮಾರಿಗೆ ಚಾಸಾ-1 ರವರು ಮತ್ತು ತಾನು ಮೊಬೈಲ್ ಅಂಗಡಿಯನ್ನು ಮುಚ್ಚಿ ಮನೆಗೆ ತೆರಳಿರುತ್ತೇವೆಂದು, ನಂತರ ಮಾರನೇ ದಿನ ಬೆಳಗ್ಗೆ ಸುಮಾರು 07-00 ಗಂಟೆಗೆ ಚಾಸಾ-1 ರವರು ಬೆಳಗ್ಗೆ 07-00 ಗಂಟೆ ಸುಮಾರಿಗೆ ದೂರವಾಣಿ ಕರೆಯನ್ನು ಮಾಡಿ ನಮ್ಮ ಅಂಗಡಿಯ ಶೆಟ್ಟರನ್ನು ಮುರಿದು ಯಾರೋ ಕಳ್ಳತನ ಮಾಡಿರುತ್ತಾರೆ ಎಂದು

ತಿಳಿಸಿದ್ದು, ನಂತರ ಸುಮಾರು 09-00 ಗಂಟೆಗೆ ತಾನು ಕೆಲಸ ಮಾಡುತ್ತಿದ್ದ ಓಂ ಕಮ್ಯೂನಿಕೇಷನ್ ಅಂಗಡಿಗೆ ತೆರಳಿದಾಗ ಅಲ್ಲಿ ಜನರು ಸೇರಿದ್ದರು ಮತ್ತು ಪೋಲೀಸರು ಸಹ ಬಂದಿದ್ದರು ಎಂದು, ಆ ಸಮಯದಲ್ಲಿ ಚಾಸಾ-1 ಮತ್ತು ಚಾಸಾ-5 ರವರು ಘಟನಾ ಸ್ಥಳಕ್ಕೆ ಬಂದಿದ್ದರು ಎಂದು, ತಮ್ಮ ಅಂಗಡಿಯ ಮುಂದೆ ಒಂದು ಮುರಿದ ಬೀಗ, ರಾಡ ಹಾಗೂ ಸ್ಕ್ರೂ ಡ್ರೈವರ ಕೆಳಗೆ ಬಿದ್ದಿದ್ದು ಕಂಡು ಬಂದಿರುತ್ತದೆ ಎಂದು, ಘಟನೆಯ ಬಗ್ಗೆ ಚಾಸಾ-1 ರವರು ಪೋಲೀಸರಿಗೆ ಮಾಹಿತಿ ಮತ್ತು ದೂರನ್ನು ನೀಡಿರುತ್ತಾರೆಂದು, ತಾನು ದಿನಾಂಕಃ 20.12.2018 ರಂದು ಪೋಲೀಸರಿಗೆ ಘಟನೆಯ ಬಗ್ಗೆ ಹೇಳಿಕೆಯನ್ನು ನೀಡಿದ್ದು, ದಿನಾಂಕಃ 28.12.2018 ರಂದು ಪೋಲೀಸರು ಕಳುವು ಮಾಡಿದ ಆರೋಪಿತರನ್ನು ಪೋಲೀಸರು ತನಗೆ ಪೋಲೀಸ ಠಾಣೆಯಲ್ಲಿ ತೋರಿಸಿರುತ್ತಾರೆಂದು, ಆರೋಪಿತರುಗಳು ರೆಡ್ ಮೀ, ಸ್ಯಾಮಸಂಗ್ , ಓಪ್ಪೋ, ವಿವೋ ಹಾಗೂ ಲಾವಾ ಕಂಪನಿಯ ಒಟ್ಟು 31 ಮೊಬೈಲ್ ಸ್ಮಾರ್ಟ ಫೋನಗಳು ಕಳುವು ಆದದ್ದು ಕಂಡು ಬಂದಿರುತ್ತದೆ ಎಂದು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉಃ 1 ನೇ ಆರೋಪಿ

2 ನೇ ಆರೋಪಿ

**ಪ್ರ:8. ಪಿಡಬ್ಲ್ಯೂ-7,** ಸುದೀಪ ತಂದೆ ಮಲ್ಲೇಶಪ್ಪ ಹರಿಜನ, ಇವರು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, - ದಿನಾಂಕಃ 28.12.2018 ರಂದು ಹಿರೇಕೆರೂರು ತಾಲೂಕು ಚಿಕ್ಕೇರೂರು ಆಟೋ ಸ್ಟ್ಯಾಂಡಿನ ಚಾಸಾ-10 ಮತ್ತು 11 ರವರು ಜೊತೆಗೆ ಇರುವ ಸಮಯದಲ್ಲಿ ನಿಟ್ಟೂರು ಗ್ರಾಮದ ಇಬ್ಬರೂ ನಮ್ಮಲ್ಲಿ ಬಂದು ತಮ್ಮದು ಮೊಬೈಲ್ ಅಂಗಡಿ ಇದೆ ಅದನ್ನು ಬಂದ್ ಮಾಡುತ್ತಾ ಇದ್ದೇವೆ ಎಂದು, ಆ ಕಾರಣದಿಂದ ಮೊಬೈಲಗಳನ್ನು ಮಾರಾಟ ಮಾಡುತ್ತಿದ್ದೇವೆ ಎಂದು ಹೇಳಿ ರೆಡ್ ಮಿ ಕಂಪನಿಯ 6 ಎ ಮೊಬೈಲನ್ನು 5,000/- ರೂಪಾಯಿಗಳಿಗೆ ಖರೀದಿಗೆ ಕೊಟ್ಟಿರುತ್ತಾರೆಂದು, ಅದೇ ರೀತಿ ಚಾಸಾ-10 ಮತ್ತು 11 ರವರ ಸ್ಯಾಮಸಂಗ ಕಂಪನಿಯ ಮೊಬೈಲುಗಳನ್ನು ಆರೋಪಿತರುಗಳಿಂದ ರೂಪಾಯಿ 7,000/- ಕೊಟ್ಟು ಖರೀದಿಸಿರುತ್ತಾರೆಂದು, ನಂತರ ದಿನಾಂಕಃ 28.12.2018 ರಂದು ತಾವು ತಮ್ಮ ಊರಿನ ಬಸ್ ಸ್ಟ್ಯಾಂಡ ಹತ್ತಿರ ಆಟೋ ಸ್ಟ್ಯಾಂಡಿನಲ್ಲಿ ಇದ್ದ ಸಮಯದಲ್ಲಿ ತನ್ನನ್ನು ಹಾಗೂ ಚಾಸಾ-10 ಮತ್ತು 11 ರವರನ್ನು ಬಂದು ವಿಚಾರಿಸಿ ಸದರಿ ಮೊಬೈಲಗಳನ್ನು ಅಯೂಬ್ ಖಾನ್ ಮತ್ತು ಇನ್ನೊಬ್ಬನು ಕಳುವು ಮಾಡಿ ತಮಗೆ ಮಾರಾಟ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆಂದು, ನಂತರ ಬ್ಯಾಡಗಿ

ಪೋಲೀಸ್ ಠಾಣೆಗೆ ಮೊಬೈಲ್ ಸಮೇತ ಬರ ಹೇಳಿದ್ದು, ಅದರಂತೆ ತಾವು ಬ್ಯಾಡಗಿ ಪೋಲೀಸ್ ಠಾಣೆಗೆ ಬಂದು ಮೊಬೈಲನ್ನು ಕೊಟ್ಟಾಗ ಆರೋಪಿತರುಗಳು ಕಳ್ಳತನ ಮಾಡಿದ ವಿಷಯವು ತಮಗೆ ತಿಳಿದು ಬಂದಿರುತ್ತದೆ ಎಂದು ಆದರೆ ಸದರಿ ಮೊಬೈಲನ್ನು ಮಾರಾಟ ಮಾಡುವ ಕಾಲಕ್ಕೆ ಕಳ್ಳತನ ಮಾಡಿರುತ್ತಾರೆ ಎಂದು ತನಗೆ ತಿಳಿದು ಬಂದಿರುತ್ತದೆ ಎಂದು, ನಾನು, ಚಾಸಾ–10 ಮತ್ತು 11 ರವರು ಆರೋಪಿತರುಗಳಿಂದ ಖರೀದಿಸಿದ ಮೊಬೈಲನ್ನು ಹಾಜರುಪಡಿಸುವ ಕಾಲಕ್ಕೆ ಪೋಲೀಸರು ಪಂಚನಾಮೆಯನ್ನು ಮಾಡಿರುತ್ತಾರೆಂದು, ನಿಪಿ–33 ನ್ನು ತಯಾರಿಸುವ ಕಾಲಕ್ಕೆ ಪೋಲೀಸರು ಎರಡು ಭಾವಚಿತ್ರಗಳನ್ನು ತೆಗೆದಿರುತ್ತಾರೆಂದು, ನಿಪಿ–33 ಪಂಚನಾಮೆಯನ್ನು ದಿನಾಂಕಃ 28.12.2018 ರಂದು ಪೋಲೀಸ್ ಠಾಣೆಯಲ್ಲಿ ಸಂಜೆ 05.30 ರಿಂದ 06.30 ರ ನಡುವಿನ ಅವಧಿಯಲ್ಲಿ ತಯಾರಿಸಿರುತ್ತಾರೆಂದು, ನಿಪಿ–33 ನ್ನು ತಯಾರಿಸುವ ಕಾಲಕ್ಕೆ ಪೋಲೀಸರಿಗೆ ಮೊಬೈಲನ್ನು ಆರೋಪಿತರುಗಳು ಮಾರಾಟ ಮಾಡಿದ ಬಗ್ಗೆ ತಿಳಿಸಿರುತ್ತೇವೆಂದು, ಈ ಬಗ್ಗೆ ತಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆಂದು, ನಿಪಿ–34 ಮತ್ತು ನಿಪಿ–35 ರಲ್ಲಿ ಕಾಣುವ ಮೊಬೈಲಗಳನ್ನು ತಾನು, ಚಾಸಾ–10 ಮತ್ತು ಚಾಸಾ–11 ರವರು ಆರೋಪಿತರುಗಳಿಂದ ಖರೀದಿಗೆ ತೆಗೆದುಕೊಂಡಿರುತ್ತೇವೆಂದು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉಃ 1 ನೇ ಆರೋಪಿ

2 ನೇ ಆರೋಪಿ

**ಪ್ರಃ9. ಪಿಡಬ್ಲ್ಯೂ–8,** ಪ್ರದೀಪ ತಂದೆ ಶಿವಪ್ಪ ಮುಳಗುಂದ, ಇವರು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, – ದಿನಾಂಕಃ 28.12.2018 ರಂದು ಹಿರೇಕೆರೂರು ತಾಲೂಕು ಚಿಕ್ಕೇರೂರು ಆಟೋ ಸ್ಟ್ಯಾಂಡಿನ ಚಾಸಾ–9 ಮತ್ತು 11 ರವರು ಜೊತೆಗೆ ಇರುವ ಸಮಯದಲ್ಲಿ ನಿಟ್ಟೂರು ಗ್ರಾಮದ ಇಬ್ಬರೂ ತಮ್ಮಲ್ಲಿ ಬಂದು ತಮ್ಮದು ಮೊಬೈಲ್ ಅಂಗಡಿ ಇದೆ ಅದನ್ನು ಬಂದ್ ಮಾಡುತ್ತಾ ಇದ್ದೇವೆ ಎಂದು, ಆ ಕಾರಣದಿಂದ ಮೊಬೈಲಗಳನ್ನು ಮಾರಾಟ ಮಾಡುತ್ತಿದ್ದೇವೆ ಎಂದು ಹೇಳಿ ರೆಡ್ ಮಿ ಕಂಪನಿಯ 6 ಎ ಮೊಬೈಲನ್ನು 5,000/– ರೂಪಾಯಿಗಳಿಗೆ ಖರೀದಿಗೆ ಕೊಟ್ಟಿರುತ್ತಾರೆಂದು, ಅದೇ ರೀತಿ ಚಾಸಾ–9 ಮತ್ತು 11 ರವರು ಸ್ಯಾಮಸಂಗ ಕಂಪನಿಯ ಮೊಬೈಲುಗಳನ್ನು ಆರೋಪಿತರುಗಳಿಂದ ರೂಪಾಯಿ 7,000/– ಕೊಟ್ಟು ಖರೀದಿಸಿರುತ್ತಾರೆಂದು, ನಂತರ ದಿನಾಂಕಃ 28.12.2018 ರಂದು ತಾವು ತಮ್ಮ ಊರಿನ ಬಸ್ ಸ್ಟ್ಯಾಂಡ ಹತ್ತಿರ ಆಟೋ ಸ್ಟ್ಯಾಂಡಿನಲ್ಲಿ ಇದ್ದ ಸಮಯದಲ್ಲಿ ತನ್ನನ್ನು ಹಾಗೂ ಚಾಸಾ–9 ಮತ್ತು 11 ರವರನ್ನು ಬಂದು

ವಿಚಾರಿಸಿ ಸದರಿ ಮೊಬೈಲಗಳನ್ನು ಅಯೂಬ್ ಖಾನ್ ಮತ್ತು ಇನ್ನೊಬ್ಬನು ಕಳುವು ಮಾಡಿ ತಮಗೆ ಮಾರಾಟ ಮಾಡಿರುತ್ತಾರೆ ಎಂದು ತಿಳಿಸಿರುತ್ತಾರೆಂದು, ನಂತರ ಬ್ಯಾಡಗಿ ಪೋಲೀಸ್ ಠಾಣೆಗೆ ಮೊಬೈಲ್ ಸಮೇತ ಬರ ಹೇಳಿದ್ದು ಅದರಂತೆ ತಾವು ಬ್ಯಾಡಗಿ ಪೋಲೀಸ್ ಠಾಣೆಗೆ ಬಂದು ಮೊಬೈಲನ್ನು ಕೊಟ್ಟಾಗ ಆರೋಪಿತರುಗಳು ಕಳ್ಳತನ ಮಾಡಿದ ವಿಷಯವು ತಮಗೆ ತಿಳಿದು ಬಂದಿರುತ್ತದೆ ಎಂದು, ಆದರೆ ಸದರಿ ಮೊಬೈಲನ್ನು ಮಾರಾಟ ಮಾಡುವ ಕಾಲಕ್ಕೆ ಕಳ್ಳತನ ಮಾಡಿರುತ್ತಾರೆ ಎಂದು ತನಗೆ ತಿಳಿದು ಬಂದಿರುತ್ತದೆ ಎಂದು, ತಾನು, ಚಾಸಾ-9 ಮತ್ತು 11 ರವರು ಆರೋಪಿತರುಗಳಿಂದ ಖರೀದಿಸಿದ ಮೊಬೈಲನ್ನು ಹಾಜರುಪಡಿಸುವ ಕಾಲಕ್ಕೆ ಪೋಲೀಸರು ಪಂಚನಾಮೆಯನ್ನು ಮಾಡಿರುತ್ತಾರೆಂದು, ನಿಪಿ-33 ನ್ನು ತಯಾರಿಸುವ ಕಾಲಕ್ಕೆ ಪೋಲೀಸರು ಎರಡು ಭಾವಚಿತ್ರಗಳನ್ನು ತೆಗೆದಿರುತ್ತಾರೆಂದು, ನಿಪಿ-33 ಪಂಚನಾಮೆಯನ್ನು ದಿನಾಂಕಃ 28.12.2018 ರಂದು ಪೋಲೀಸ್ ಠಾಣೆಯಲ್ಲಿ ಸಂಜೆ 05.30 ರಿಂದ 06.30 ರ ನಡುವಿನ ಅವಧಿಯಲ್ಲಿ ತಯಾರಿಸಿರುತ್ತಾರೆಂದು, ನಿಪಿ-33 ನ್ನು ತಯಾರಿಸುವ ಕಾಲಕ್ಕೆ ಪೋಲೀಸರಿಗೆ ಮೊಬೈಲನ್ನು ಆರೋಪಿತರುಗಳು ಮಾರಾಟ ಮಾಡಿದ ಬಗ್ಗೆ ತಿಳಿಸಿರುತ್ತೇವೆಂದು, ಈ ಬಗ್ಗೆ ತಾನು ಪೋಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆಂದು, ನಿಪಿ-34 ಮತ್ತು ನಿಪಿ-35 ರಲ್ಲಿ ಕಾಣುವ ಮೊಬೈಲಗಳನ್ನು ತಾನು, ಚಾಸಾ-9 ಮತ್ತು ಚಾಸಾ-11 ರವರು ಆರೋಪಿತರುಗಳಿಂದ ಖರೀದಿಗೆ ತೆಗೆದುಕೊಂಡಿರುತ್ತೇವೆಂದು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉಃ 1 ನೇ ಆರೋಪಿ

2 ನೇ ಆರೋಪಿ

**ಪ್ರಃ10. ಪಿಡಬ್ಲ್ಯೂ-9,** ಜಗದೀಶ ತಂದೆ ಚಂದ್ರಪ್ಪ ಬ್ಯಾಡಗಿ, ಪೊಲೀಸ್ ಮುಖ್ಯ ಪೇದೆ, ಬ್ಯಾಡಗಿ, ಇವರು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, - ದಿನಾಂಕಃ 20.12.2018 ರಂದು ಚಾಸಾ-1 ರವರು ನೀಡಿದ ಗಣಕೀಕೃತ ಪಿರ್ಯಾಧಿಯನ್ನು ಸ್ವೀಕರಿಸಿಕೊಂಡು ಠಾಣಾ ಗುನ್ನಾ ಸಂಖ್ಯೆ: 247/2018 ರಂತೆ ಪ್ರಕರಣವನ್ನು ದಾಖಲಿಸಿ ಪ್ರ.ವ. ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ತನ್ನ ಮೇಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿರುತ್ತೇನೆಂದು, ನಂತರ ಚಾಸಾ-1 ರಿಂದ ಚಾಸಾ-3 ರವರನ್ನು ಕರೆದುಕೊಂಡು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಚಾಸಾ-1 ರವರು ನೀಡಿದ ಮಾಹಿತಿಯಂತೆ ನಿಪಿ-2 ರಂತೆ ಪಂಚನಾಮೆ ಮಧ್ಯಾಹ್ನ 03-30 ರಿಂದ 04-30 ರವರೆಗೆ ಚಾಸಾ-2 ಮತ್ತು ಚಾಸಾ-3 ರವರ ಸಮಕ್ಷಮ ಪಂಚನಾಮೆಯನ್ನು

ತಯಾರಿಸಿರುತ್ತೇವೆಂದು, ದಿನಾಂಕಃ 28.12.2018 ರಂದು ತಾನು ಮತ್ತು ಚಾಸಾ-4, ಚಾಸಾ-2 ಮತ್ತು ಆರೋಪಿತರನ್ನು ಚಾಸಾ-14 ರವರು ಕೂಡಿಕೊಂಡು ಸರ್ಕಾರಿ ವಾಹನದಲ್ಲಿ ನಿಟ್ಟೂರು ಕಡೆಗೆ ಹೋಗಿ ಜೀಪ ನಿಲ್ಲಿಸಿ ಮುಂದೆ ಹೋಗಿ ಅಲ್ಲಿ ಕಬ್ಬಿನ ತೋಟದಲ್ಲಿ ರಟ್ಟಿನ ಬಾಕ್ಸಿನಲ್ಲಿ ಮುಚ್ಚಿಟ್ಟ 24 ಮೊಬೈಲಗಳು ಮತ್ತು 1 ನೇ ಆರೋಪಿತರ ಎರಡು ಮೊಬೈಲಗಳು ಮತ್ತು 2 ನೇ ಆರೋಪಿತನ ಕಡೆ ಇದ್ದ ಒಂದು ಮೊಬೈಲಗಳನ್ನು ಚಾಸಾ-14 ರವರು ಜಪ್ತು ಪಡಿಸಿಕೊಂಡಿರುತ್ತಾರೆಂದು, ಸದರಿ ಸ್ಥಳದಲ್ಲಿ ಕಟರನ್ನು ಜಪ್ತು ಪಡಿಸಿಕೊಂಡಿರುತ್ತಾರೆಂದು, ಸದರಿ ಸ್ಥಳದಲ್ಲಿ ಬೆಳಗ್ಗೆ 10.00 ರಿಂದ 12.30 ಗಂಟೆಯ ನಡುವಿನ ಅವಧಿಯಲ್ಲಿ ಪಂಚನಾಮೆಯನ್ನು ಜರುಗಿಸಿ ಭಾವಚಿತ್ರಗಳನ್ನು ತೆಗೆದಿರುತ್ತಾರೆಂದು, ಮುಂದಿನ ತನಿಖೆಗಾಗಿ ಸದರಿ ಪ್ರಕರಣದ ಕಡತವನ್ನು ಚಾಸಾ-14 ರವರಿಗೆ ಹಸ್ತಾಂತರಿಸಿರುತ್ತೇನೆಂದು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉಃ 1 ನೇ ಆರೋಪಿ

2 ನೇ ಆರೋಪಿ

**ಪ್ರಃ11. ಪಿಡಬ್ಲ್ಯೂ-10,** ಚಿದಾನಂದ ತಂದೆ ರಾಜಪ್ಪ, ಪೊಲೀಸ್ ನಿರೀಕ್ಷಕರು, ಐ ಎಸ್ ಡಿ, ದಕ್ಷಿಣ ಕನ್ನಡ, ಮಂಗಳೂರು, ಇವರು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, -ದಿನಾಂಕಃ 20-12-2018 ರಂದು ಚಾಸಾ-13 ರವರಿಂದ ಪ್ರಕರಣದ ತನಿಖೆಯ ಕಡತವನ್ನು ಪಡೆದುಕೊಂಡು ಅದನ್ನು ಕೂಲಂಕಷವಾಗಿ ಪರಿಶೀಲಿಸಿ, ನಂತರ ಘಟನಾ ಸ್ಥಳಕ್ಕೆ ಬೇಟಿ ಪರಿಶೀಲನೆ ಮಾಡಿರುತ್ತೇನೆಂದು, ನಂತರ ಚಾಸಾ-5 ರಿಂದ ಚಾಸಾ-7 ರವರ ಹೇಳಿಕೆಗಳನ್ನು ಪಡೆದುಕೊಂಡು ತನಿಖೆಯ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆಂದು, ನಂತರ ಚಾಸಾ-1 ರವರ ಪುನರ್ ಹೇಳಿಕೆಯನ್ನು ಪಡೆದುಕೊಂಡು ತನಿಖೆಯ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆಂದು, ನಂತರ ಸಿ. ಡಿ. ಆರ್. ಸೆಲ್, ಹಾವೇರಿ ಇವರಿಗೆ ಕಳುವಾದ ಮೊಬೈಲ್‌ಗಳಲ್ಲಿ ಬಳಕೆಯಾದ ಬಗ್ಗೆ ಮಾಹಿತಿಯನ್ನು ಕೇಳಿದಾಗ ಇಲ್ಲವೆಂದು ತಿಳಿಸಿರುತ್ತಾರೆಂದು, ನಂತರ ಚಾಸಾ-12 ರವರು ಎರಡು ಘಟನಾ ಸ್ಥಳದಲ್ಲಿ ಚಾನ್ಸ ಪ್ರಿಂಟ್ ಸಿಕ್ಕ ಬಗ್ಗೆ ಮಾಹಿತಿ ನೀಡಿರುತ್ತಾರೆಂದು, ಚಾಸಾ-1 ಚಾಸಾ-5 ಮತ್ತು ಚಾಸಾ-6 ರವರು ಬೆರಳಚ್ಚು ಪಡೆದು ಸ್ಯಾಂಪಲನ್ನು ಕಳುಹಿಸಿಕೊಟ್ಟಿರುತ್ತೇನೆಂದು, ನಂತರ 26.12.2018 ರಂದು ಸಿ. ಡಿ. ಆರ್. ಸೆಲ್, ಹಾವೇರಿ ಇವರಿಂದ ಕಳುವಾದ ಮೊಬೈಲಗಳ ಐ. ಎಂ. ವಿ ನಂಬರ 861102046025770, ಸಿಮ್ ಸಂಖ್ಯೆಃ 9108085831 ನೇದ್ದನ್ನು ಹಾಕಿ ತೆಗೆದಿದ್ದು, ನಂತರ ಅದರಲ್ಲಿಯೇ 9731347943

ಉಪಯೋಗವಾಗಿದ್ದು ಅದರ ಹಿರೇಕೆರೂರು ಮತ್ತು ಚಿಕ್ಕೇರೂರು ಲೋಕೆಷನ್ ಬಂದಿರುತ್ತದೆ ಎಂದು ಮಾಹಿತಿ ಬಂದಿರುತ್ತದೆಯೆಂದು, ಎರಡು ಸಿಮ್‌ಗಳ ಸಿ. ಡಿ. ಆರ್. ಸೆಲ್, ಹಾವೇರಿ ಇವರಿಂದ ಮಾಹಿತಿ ಪಡೆದಿದ್ದು, ಅದರಲ್ಲಿ 2 ನೇ ಆರೋಪಿತನು ಸದರಿ ಮೊಬೈಲನ್ನು ಚಾಸಾ–8 ರವರಿಗೆ ಮಾರಾಟ ಮಾಡಿರುತ್ತಾರೆಂದು, ಚಾಸಾ–8 ರವರನ್ನು ಹಾಜರುಪಡಿಸಲು ಮುಖ್ಯ ಪೇದೆಯನ್ನು ಕಳುಹಿಸಿರುತ್ತೇನೆಂದು, ನಂತರ ಚಾಸಾ–8 ರವರನ್ನು ಠಾಣೆಗೆ ಹಾಜರುಪಡಿಸಿರುತ್ತಾರೆಂದು, ನಂತರ ಆತನ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆಂದು, ನಂತರ ಚಾಸಾ–2 ಮತ್ತು ಚಾಸಾ–4 ರವರನ್ನು ಹಾಜರುಪಡಿಸಿಕೊಂಡು ಬೆಳಗ್ಗೆ 11–00 ರಿಂದ 11–45 ರವರೆಗೆ ಪಂಚನಾಮೆಯನ್ನು ತಮ್ಮ ಠಾಣೆಯಲ್ಲಿಯೇ ಮಾಡಿ ಮೊಬೈಲಗಳನ್ನು ವಶಪಡಿಸಿಕೊಂಡಿರುತ್ತೇನೆಂದು, ಚಾಸಾ–13 ರವರಿಗೆ ಆರೋಪಿತರನ್ನು ಹಾಜರುಪಡಿಸಲು ಆದೇಶ ನೀಡಿರುತ್ತೇನೆಂದು, ದಿನಾಂಕಃ 28.12.2018 ರಂದು ಪಿ. ಎಸ್. ಐ ರವರು ಆರೋಪಿತರನ್ನು ಮುಂಜಾನೆ ತನ್ನ ಕಚೇರಿಗೆ ಹಾಜರುಪಡಿಸಿರುತ್ತಾರೆಂದು, ನಂತರ ಆರೋಪಿತರ ಸ್ವಇಚ್ಛಾ ಹೇಳಿಕೆಗಳನ್ನು ಪಡೆದುಕೊಂಡು ತನಿಖೆಯ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆಂದು, ಪಿ. ಸಿ. 836 ರವರಿಗೆ ಚಾಸಾ–9 ರಿಂದ ಚಾಸಾ–11 ರವರನ್ನು ಕರೆದುಕೊಂಡು ಬರಲು ಆದೇಶ ನೀಡಿರುತ್ತೇನೆಂದು, ನಂತರ ಆರೋಪಿತರನ್ನು ಕರೆದುಕೊಂಡು ಚಾಸಾ–2 ಮತ್ತು ಚಾಸಾ–4 ರವರು ಸಮಕ್ಷಮ ಘಟನಾ ಸ್ಥಳದಲ್ಲಿ ಪಂಚನಾಮೆಯನ್ನು ಬೆಳಗ್ಗೆ 08–15 ರಿಂದ 09–00 ಗಂಟೆಯ ರವರೆಗೆ ತಯಾರಿಸಿರುತ್ತೇನೆಂದು, ನಂತರ ಸಿಬ್ಬಂದಿ, ಚಾಸಾ–2, 4 ಮತ್ತು ಆರೋಪಿತರು ಸೇರಿ ಅವರು ಮುಚ್ಚಿಟ್ಟ ಮುದ್ದೆ ಮಾಲನ್ನು ವಶಪಡಿಸಿಕೊಳ್ಳಲು ಹೋಗಿರುತ್ತೇವೆಂದು, ಸದರಿ ಸ್ಥಳದಲ್ಲಿ ಆರೋಪಿತರು ತೋರಿಸಿದಂತೆ ಮುದ್ದೆ ಮಾಲನ್ನು ವಶಪಡಿಸಿಕೊಂಡು ಬೆಳಗ್ಗೆ 10–00 ರಿಂದ 12–30 ರವರೆಗೆ ಜಪ್ತು ಪಂಚನಾಮೆ ಮಾಡಿ ವಶಪಡಿಸಿಕೊಂಡಿರುತ್ತೇವೆಂದು, ಆರೋಪಿತರಿಂದ 27 ಮೊಬೈಲಗಳನ್ನು ಮತ್ತು ಒಂದು ಕಟ್ಟರನ್ನು ವಶಪಡಿಸಿಕೊಂಡಿರುತ್ತೇವೆಂದು, ನಂತರ ಪಾದದ ಮತ್ತು ಕೈ ಬೆರಳಿನ ಮುದ್ರೆಗಳನ್ನು ಪಡೆದುಕೊಂಡು ಪರೀಕ್ಷೆಗೆ ಕಳುಹಿಸಿಕೊಟ್ಟಿರುತ್ತೇನೆಂದು, ನಂತರ ದೂರುದಾರ ಮತ್ತು ಸಾಕ್ಷಿದಾರರನ್ನು ಕರೆಯಿಸಿಕೊಂಡು ಮುದ್ದೆ ಮಾಲು ಮತ್ತು ಆರೋಪಿತರನ್ನು ಗುರುತಿಸಲು ತಿಳಿಸಿರುತ್ತೇನೆಂದು, ಚಾಸಾ–9 ರಿಂದ ಚಾಸಾ–11 ರವರನ್ನು ಠಾಣೆಗೆ ಬರಮಾಡಿಕೊಂಡು ನಿಪಿ–33 ರಂತೆ ಜಪ್ತು ಮೊಬೈಲಗಳ ಪಂಚನಾಮೆಯನ್ನು ಸಂಜೆ 05–30 ರಿಂದ 06–30 ರ ನಡುವಿನ ಅವಧಿಯಲ್ಲಿ ತಯಾರಿಸಿರುತ್ತೇನೆಂದು, ಸದರಿ ಪಂಚನಾಮೆ ಕಾಲಕ್ಕೆ ನಿಪಿ–34 ರಿಂದ ನಿಪಿ–37 ರಂತೆ ಭಾವಚಿತ್ರಗಳನ್ನು ತೆಗೆದಿರುತ್ತೇವೆಂದು, ನಂತರ ಚಾಸಾ–9 ರಿಂದ ಚಾಸಾ–11 ರವರ

ಹೇಳಿಕೆಗಳನ್ನು ಪಡೆದುಕೊಂಡು ತನಿಖೆಯ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆಂದು, ಮಂಜುನಾಥರವರು ನೀಡಿದ ದೃಢೀಕರಣ ಪತ್ರವನ್ನು ಪಡೆದುಕೊಂಡು ತನಿಖೆಯ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆಂದು, ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾಸಾ-15 ರವರಿಗೆ ವಹಿಸಿಕೊಟ್ಟಿರುತ್ತೇನೆಂದು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉಃ 1 ನೇ ಆರೋಪಿ

2 ನೇ ಆರೋಪಿ

**ಪ್ರಃ12. ಪಿಡಬ್ಲ್ಯೂ-11,** ರಮೇಶ ತಂದೆ ಗುರುನಂಜಪ್ಪ ಹರಕುಣಿ, ಇವರು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, -ದಿನಾಂಕಃ 22.12.2018 ರಂದು ತಾನು ನಿಟ್ಟೂರಿನ ಹೊಂಡದ ಹತ್ತಿರ ಇದ್ದಾಗ ಆರೋಪಿತರು ಅಲ್ಲಿಗೆ ಬಂದು ತನಗೆ ಒಂದು ರೆಡ ಮಿ ಮೊಬೈಲ್ ತೋರಿಸಿ ಇದು ತಮ್ಮ ಮೊಬೈಲ್ ಅದನ್ನು ಮಾರಾಟ ಮಾಡುತ್ತೇವೆ ಅಂದಾಗ ಅದನ್ನು ಅವರ ಕಡೆಯಿಂದ ರೂಪಾಯಿ 4,500/- ಗಳಿಗೆ ತೆಗೆದುಕೊಂಡಿರುತ್ತೇನೆಂದು, ನಂತರ ಅದಕ್ಕೆ ತನ್ನ ಹೆಸರಿನ ಏರಟೆಲ್ ಸಿಮ್ ಹಾಕಿ ಉಪಭೋಗ ಮಾಡುತ್ತಿರುವಾಗ ದಿನಾಂಕಃ 27.12.2018 ಬ್ಯಾಡಗಿ ಪೋಲೀಸರು ತನ್ನ ಹತ್ತಿರ ಬಂದು ಇದ್ದು ಕದ್ದ ಮೊಬೈಲ್ ಇದೆ ಅಂತಾ ಹೇಳಿ ತನ್ನನ್ನು ಬ್ಯಾಡಗಿ ಪೋಲೀಸ್ ಠಾಣೆಗೆ ಕರೆದುಕೊಂಡು ಬಂದು ಬೆಳಗ್ಗೆ 11.15 ರಿಂದ 11.45 ರವರೆಗೆ ನನ್ನನ್ನು ವಿಚಾರಣೆ ಮಾಡಿರುತ್ತಾರೆಂದು, ನಂತರ ತನ್ನ ಹತ್ತಿರ ಇದ್ದ ಮೊಬೈಲನ್ನು ತಮ್ಮ ವಶಕ್ಕೆ ಪಡೆದರು ಎಂದು, ಆ ಸಮಯದಲ್ಲಿ ಚಾಸಾ-2 ಮತ್ತು 4 ರವರು ಹಾಜರಿದ್ದರು ಎಂದು, ತನ್ನ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆಂದು, ಸದರಿ ಪಂಚನಾಮೆಯನ್ನು ಬೆಳಗ್ಗೆ 11.00 ರಿಂದ 11.45 ರವರೆಗೆ ಮಾಡಿರುತ್ತಾರೆಂದು, ಈ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆಂದು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉಃ 1 ನೇ ಆರೋಪಿ

2 ನೇ ಆರೋಪಿ

**ಪ್ರಃ13. ಪಿಡಬ್ಲ್ಯೂ-12,** ಆರ್ ಆರ್ ಪಾಟೀಲ, ಪಿ.ಐ ಶಿಕಾರಿಪುರ ಗ್ರಾಮೀಣ, ಶಿಕಾರಿಪುರ, ಇವರು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, -ದಿನಾಂಕಃ 09.01.2019 ರಂದು ಚಾಸಾ-14 ರವರಿಂದ ಕಡತವನ್ನು ತೆಗೆದುಕೊಂಡು ಪರಿಶೀಲನೆ ಮಾಡಿ ತನಿಖೆಯನ್ನು ಮಂದುವರೆಸಿ ಅದೇ ದಿನ ಚಾಸಾ-12 ರಿಂದ ಬೆರಳುಮುದ್ರೆ ವರದಿ

ಬಂದಿದ್ದು ಅದನ್ನು ಸ್ವೀಕರಿಸಿದ್ದೇನೆಂದು, ದಿನಾಂಕಃ 22.01.2019 ರಂದು ಮಾನ್ಯ ನ್ಯಾಯಾಲಯದ ಆದೇಶದಂತೆ ಮಾಲು ಬಿಡುಗಡೆ ಪಂಚನಾಮೆಯನ್ನು ಶ್ರೀನಿವಾಸ ತಂದೆ ಬಸವರಾಜ ಕಲಕೋಟಿ ಮತ್ತು ಕಾಂತೇಶ ಕರಬಸಪ್ಪ ಬಂಡಿವಡ್ಡರ ಇವರ ಸಮಕ್ಷಮ ಮುಂಜಾನೆ 10.00 ರಿಂದ 12.00 ರವರೆಗೆ ಮಾಡಿ ಚಾಸಾ–01 ರವರಿಗೆ ನೀಡಿರುತ್ತೇನೆಂದು, ಸದರಿ ಪಂಚನಾಮೆಯನ್ನು ಪಿಸಿ–828 ರವರು ಟೈಪ ಮಾಡಿರುತ್ತಾರೆಂದು, ನಂತರ ಆರೋಪಿತನ ವಿರುದ್ಧ ಸಾಕ್ಷ್ಯ ಕಂಡು ಬಂದಿದ್ದರಿಂದ ದೋಷಾರೋಪಣೆ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆಂದು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉಃ 1 ನೇ ಆರೋಪಿ

2 ನೇ ಆರೋಪಿ

**ಪ್ರಃ14. ಪಿಡ್ಲ್ಯೂ–13,** ಮಂಜುನಾಥ ಶೇಖಪ್ಪ ಕಲ್ಲೇದೇವರು, ಪಿ ಎಸ್ ಐ, ಜಿಲ್ಲಾ ಪೊಲೀಸಠಾಣೆ ದಾವಣಗೆರೆ, ಇವರು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುವುದೇನೆಂದರೆ, – ದಿನಾಂಕ 20.12.2018 ರಂದು ಮಧ್ಯಾಹ್ನ 1.50 ಕ್ಕೆ ಹಾವೇರಿ ಕಂಟ್ರೋಲ್ ರೂಮ್ ಮೂಲಕ ಬ್ಯಾಡಗಿ ಪೊಲೀಸ್ ಠಾಣೆಯಿಂದ ದೂರವಾಣಿ ಕರೆಯ ಮೂಲಕ ಬ್ಯಾಡಗಿ ಪೊಲೀಸ್ ಠಾಣೆ ಸಂಖ್ಯೆ 247/2018 ನೇದ್ದರಲ್ಲಿ ಹಾಜರಾಗಲು ತಿಳಿಸಿದ್ದು ಅದರಂತೆ ತಾನು ಮತ್ತು ತಮ್ಮ ಸಿಬ್ಬಂದಿಯವರು ಅಪರಾಧ ಸ್ಥಳಕ್ಕೆ ಭೇಟಿಯಾಗಿ ಕೂಲಂಕುಷವಾಗಿ ವೈಜ್ಞಾನಿಕವಾಗಿ ಪರಿಶೀಲಿಸಿ ಎರಡು ಆಕಸ್ಮಿಕ ಬೆರಳು ಮುದ್ರೆಗಳನ್ನು ಗ್ಲಾಸ್ ಶೋಕೇಶ್ ಮೇಲೆ ವೃದ್ಧಿಸಿ ಅವುಗಳನ್ನು ಎ ಮತ್ತು ಬಿ ಎಂದು ಗುರುತಿಸಿಕೊಂಡು ಪಾರದರ್ಶಕ ಪ್ಲಾಸ್ಟಿಕ್ ಹಾಳೆಗೆ ಸ್ಥಳಾಂತರಿಸಿಕೊಂಡು ಹಾಗೂ ಪಿರ್ಯಾದಿಯ ಮತ್ತು ಅಂಗಡಿಯ ಕೆಲಸಗಾರರ ಬೆರಳು ಮುದ್ರೆಗಳನ್ನು ಪಡೆದು ಮುಂದಿನ ಕ್ರಮಕ್ಕಾಗಿ ಬೆರಳು ಮುದ್ರೆ ಘಟಕಕ್ಕೆ ತಂದಿರುತ್ತೇನೆಂದು, ನಂತರ ಸದರಿ ಎ ಮತ್ತು ಬಿ ಎಂದು ಆಕಸ್ಮಿಕ ಬೆರಳು ಮುದ್ರೆಗಳನ್ನು ಪಿರ್ಯಾದಿ ಮತ್ತು ಅಂಗಡಿಯ ಕೆಲಸಗಾರರ ಬೆರಳು ಮುದ್ರೆಗಳಿಗೆ ಹೋಲಿಕೆ ಮಾಡಿ ನೋಡಲಾಗಿ ಬಿ ಎಂದು ಗುರುತಿಸಿದ ಆಕಸ್ಮಿಕ ಬೆರಳು ಮುದ್ರೆಯ ಚಾಸಾ–1 ನೇದ್ದವರ ಬಲಗೈ ಹೆಬ್ಬೆರಳಿನ ಮುದ್ರೆಗೆ ಹೋಲಿಕೆಯಾಗಿರುತ್ತದೆ ಎಂದು, ಎ ಎಂದು ಗುರುತಿಸಿದ ಮುದ್ರೆಯ ಆಕಸ್ಮಿಕ ಬೆರಳು ಮುದ್ರೆಯ ಹೋಲಿಕೆ ಆಗಿರುವುದಿಲ್ಲವೆಂದು, ನಂತರ ಎ ಎಂದು ಗುರುತಿಸಿದ ಆಕಸ್ಮಿಕ ಬೆರಳು ಮುದ್ರೆಯನ್ನು ಗಣಕಯಂತ್ರದ ಮೂಲಕ ಎ ಎಫ್ ಐ ಎಸ್ ತಂತ್ರಾಂಶದಲ್ಲಿ ಶೋಧಿಸಿದ್ದು ಪತ್ತೆಯಾಗಿರುವುದಿಲ್ಲವೆಂದು, ತದ ನಂತರ ಎ ಬೆರಳು ಮುದ್ರೆಯನ್ನು ಗಣಕ ಯಂತ್ರದ ತಂತ್ರಾಂಶದಲ್ಲಿ ಎ ಎಫ್ ಐ ಎಸ್ ನಲ್ಲಿ ದಾಖಲು ಮಾಡಿರುತ್ತೇನೆಂದು, ದಿನಾಂಕಃ 07.01.2019 ರಂದು ಪೊಲೀಸ್ ನಿರೀಕ್ಷಕರು

ಬ್ಯಾಡಗಿಯವರು ಸದರಿ ಪ್ರಕರಣದಲ್ಲಿ ದಸ್ತಗಿರಿ ಮಾಡಿದ ಎರಡು ಜನ ಆರೋಪಿತರ ಬೆರಳು ಮುದ್ರೆ ಪತ್ರಗಳನ್ನು ಸದರಿ ಪ್ರಕರಣಗಳಲ್ಲಿ ದೊರೆತ ಆಕಸ್ಮಿಕ ಬೆರಳು ಮುದ್ರೆಗಳಿಗೆ ಪರಿಶೀಲಿಸಿ ಮಾಹಿತಿ ನೀಡುವಂತೆ ಪತ್ರ ಬರೆದಿರುತ್ತಾರೆಂದು, ಅದೇ ದಿನ ಸದರಿ ವ್ಯಕ್ತಿಗಳ ಬೆರಳು ಮುದ್ರೆ ಪ ಪತ್ರಗಳನ್ನು ಎ ಎಫ್ ಐ ಎಸ್ ತಂತ್ರಾಂಶದಲ್ಲಿ ಶೋಧಿಸಿದಾಗ ಸದರಿ ಪ್ರಕರಣದಲ್ಲಿ ದೊರೆತ ಎ ಎಂದು ದೊರೆತ ಆಕಸ್ಮಿಕ ಬೆರಳು ಮುದ್ರೆಯ 1 ನೇ ಆರೋಪಿತನ ಎಡಗೈ ಹೆಬ್ಬೆರಳಿನ ಮುದ್ರೆಗೆ ಅನ್ಯೂನ್ಯವಾಗಿ ಹೊಂದಾಣಿಕೆ ಆಗಿರುತ್ತದೆ ಎಂದು, ಸದರಿ ಆರೋಪಿಯ ಬೆರಳು ಮುದ್ರೆ ವರ್ಗೀಕರಣ ಸಂಖ್ಯೆ 9/20 R/W 000/00126-20 ಅಂತಾ ಮತ್ತು ಬೆರಳು ಮುದ್ರೆ ಪ ಪತ್ರದ ಸಿ ಓ ಐಡಿ ನಂಬರ KS 43906a005227 ಆಗಿರುತ್ತದೆ ಎಂದು, ಆಕಸ್ಮಿಕ ಬೆರಳು ಮುದ್ರೆಯು ಆರೋಪಿಯ ಬೆರಳು ಮುದ್ರೆಗೆ ಹೊಂದಾಣಿಕೆ ಆಗಿರುತ್ತದೆ ಎಂದು ತಮ್ಮ ಮುಖ್ಯ ಸಾಕ್ಷಿಯಲ್ಲಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉಃ 1 ನೇ ಆರೋಪಿ

2 ನೇ ಆರೋಪಿ

**ಪ್ರಃ15.**ಈ ಪ್ರಕರಣದಲ್ಲಿ ನೀವು ಎನಾದರೂ ಹೇಳುವುದು ಇದೇಯಾ?

ಉಃ 1 ನೇ ಆರೋಪಿ

2 ನೇ ಆರೋಪಿ

**ಪ್ರಃ16.**ಈ ಪ್ರಕರಣದಲ್ಲಿ ನೀವು ನಿಮ್ಮ ಪರವಾಗಿ ಸಾಕ್ಷಿದಾರರನ್ನು ವಿಚಾರಣೆಯ ಒಳಪಡಿಸಲು ಅಥವಾ ನೀನೇ ಸಾಕ್ಷಿದಾರನೆಂದು ವಿಚಾರಣೆಗೆ ಒಳಪಡಲು ಇಚ್ಚಿಸುವಿಯಾ ಹೇಗೆ?

ಉಃ 1 ನೇ ಆರೋಪಿ

2 ನೇ ಆರೋಪಿ

(ಮೇಲಿನ ಆರೋಪಿತರ ಹೇಳಿಕೆಯನ್ನು ಹಾಗೂ ಅವರಿಗೆ ಸಾಕ್ಷಿದಾರರ ಸಾಕ್ಷಿ ಹೇಳಿಕೆಗಳನ್ನು ಅರ್ಥವತ್ತಾಗಿ ತಿಳಿಸಿ ಹೇಳಿ ಕೇಳಿದ ನಂತರ ಅದಕ್ಕೆ ಅವರು ಕೊಟ್ಟ ಉತ್ತರವನ್ನು ಅವರು ಹೇಳಿದಂತೆ ಬರೆದುಕೊಳ್ಳಲಾಗಿದೆ ಅಂತ ದೃಢೀಕರಿಸುತ್ತೇನೆ),

Sd/-

Date:28.10.2025

Civil Judge and JMFC.,
Byadgi.